

# ಚೈತ್ರ ಕಾಲ

■ ಸುಮಲತಾ ಎನ್‌

'ತಲೆದಂಡ', 'ಟೋಬಿ', 'ಸಪ್ತಸಾಗರದಾಚೆ ಎಲ್ಲೋ' ಸಿನಿಮಾಗಳಲ್ಲಿ ಸಹಜ ನಟನೆ, ಅಚ್ಚುಕಟ್ಟಾದ ಪಾತ್ರ ನಿರ್ವಹಣೆಯಿಂದ ಗಮನಸೆಳೆದ ನಟಿ ಚೈತ್ರಾ ಜೆ. ಆಚಾರ್. 'ನಮ್ಮ ನಡುವಿನ ಹುಡುಗಿ'ಯಾಗಿ ಮೆಚ್ಚುಗೆ ಪಡೆದುಕೊಂಡಿರುವ ಅವರು ಕನ್ನಡದೊಂದಿಗೆ ಈಗ ತಮಿಳು ಚಿತ್ರಗಳಲ್ಲೂ ಅಭಿನಯಿಸುತ್ತಿದ್ದಾರೆ. ತಮ್ಮ ಸಿನಿಮಾ ಬದುಕಿನ ಬಗ್ಗೆ 'ಸುಧಾ'ದೊಂದಿಗೆ ಮಾತನಾಡಿದ್ದಾರೆ.

◆ **ತಮಿಳು ಸಿನಿಮಾರಂಗ ಪ್ರವೇಶಿಸಿದ್ದೀರಿ. ಈ ಅವಕಾಶ ದೊರೆತದ್ದು ಹೇಗೆ? ಅಲ್ಲಿನ ಅನುಭವಗಳು ಹೇಗಿವೆ?**

ನಿರ್ದೇಶಕ ರಾಜು ಮುರುಗನ್ ಅವರ ಸಿನಿಮಾ. ಇನ್ನೂ ಅಂತಿಮ ಶೀರ್ಷಿಕೆ ಇಟ್ಟಿಲ್ಲ. ಶಶಿಕುಮಾರ್ ಅವರಿಗೆ ಜೋಡಿಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ. 'ಟೋಬಿ', 'ಸಪ್ತಸಾಗರದಾಚೆ ಎಲ್ಲೋ' ಸಿನಿಮಾಗಳಲ್ಲಿ ನನ್ನನ್ನು ನೋಡಿ ಈ ಪಾತ್ರಕ್ಕೆ ಕೇಳಿದರು. ಈ ಪಾತ್ರ ಬರೆಯುವಾಗಲೇ ನನ್ನನ್ನು ಈ ಪಾತ್ರಕ್ಕೆ ತರುವ ಆಲೋಚನೆ ಬಂದಿತ್ತಂತೆ. ನಾನೇ ಈ ಪಾತ್ರ ಮಾಡಬೇಕೆಂದು ಪ್ರೀತಿಯಿಂದ ಒತ್ತಾಯಿಸಿದರು. ಒಬ್ಬ ಕಲಾವಿದೆಗೆ ಇದಕ್ಕಿಂತ ಬೇರೇನು ಬೇಕು? ಇದೇ ನನಗೆ ದೊಡ್ಡ ಖುಷಿ.

ತುಂಬಾ ಪ್ಯಾಷನೇಟ್ ಆಗಿ ಇಲ್ಲಿನವರು ಸಿನಿಮಾ ಮಾಡುತ್ತಾರೆ. ತಂಡದಲ್ಲಿ ಕೆಲಸ ಮಾಡುವ ರೀತಿ, ಅವರ ಆಲೋಚನಾ ಕ್ರಮಗಳನ್ನು ನೋಡಿದರೆ ಖುಷಿಯಾಗುತ್ತದೆ. ಭಾಷೆಯೊಂದು ಬಿಟ್ಟರೆ ಕನ್ನಡಕ್ಕಿಂತ ತುಂಬಾ ಭಿನ್ನತೆ ಇದೆ ಎಂದು ಅನಿಸುವುದಿಲ್ಲ.

# ಹೃತಿಕಾ ಮನೋಭಿಲಾಷೆ

'ಜನರಿಗೆ ಈಗ ಸಾಕೆನಿಸುವಷ್ಟು ಮನರಂಜನಾ ಆಯ್ಕೆಗಳಿವೆ. ಅವರು ಏನನ್ನು ನೋಡಲು ಬಯಸುತ್ತಾರೆ ಎಂಬುದರ ಕುರಿತು ಅವರಿಗೆ ಅರಿವಿರುತ್ತದೆ. ಈಚಿನ ವರ್ಷಗಳಲ್ಲಿ ಸಿನಿಮಾಗಳ ಬಗ್ಗೆ ಹೆಚ್ಚು ವಿಮರ್ಶೆ ಮಾಡುತ್ತಾರೆ. ವಿವೇಚನಾಶೀಲರಾಗಿದ್ದಾರೆ ಕೂಡ. ಹೀಗಿದ್ದಾಗ ಒಬ್ಬ ನಟಿಯಾಗಿ, ಸಿನಿಮಾರಂಗದಲ್ಲಿ ದೀರ್ಘ ಕಾಲ ಇರಲು ಬಯಸುವವಳಾಗಿ, ನಾನು ಆರಿಸಿಕೊಳ್ಳುವ ಪಾತ್ರಗಳ ಬಗ್ಗೆ ಗಮನ ನೀಡಲೇಬೇಕಿದೆ ಹಾಗೂ ಸೆಲೆಕ್ಟಿವ್ ಆಗಿರಲೇಬೇಕಿದೆ' ಎಂದಿದ್ದಾರೆ ನಟಿ ಹೃತಿಕಾ ಶ್ರೀನಿವಾಸ್.

'ಅಪರೂಪ' ಸಿನಿಮಾದಿಂದ ತಮ್ಮ ಸಿನಿ ಪಯಣ ಆರಂಭಿಸಿದ್ದ ಹೃತಿಕಾ ಶ್ರೀನಿವಾಸ್, 'ಉಡಾಳ', 'ಗಣಿ ಬಿಕಾಂ ಪಾಸ್ 2', 'ಔಟ್ ಆಫ್ ಸಿಲಬಸ್' ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಕನ್ನಡ ಮಾತ್ರವಲ್ಲದೆ ಎರಡು ತೆಲುಗು ಸಿನಿಮಾಗಳಲ್ಲಿಯೂ ನಟಿಸುತ್ತಿದ್ದಾರೆ. ಸಿನಿಮಾರಂಗಕ್ಕೆ ಹೊಸಬರಾಗಿದ್ದರೂ ಪ್ರೇಕ್ಷಕರ ಮನೋಭಿಲಾಷೆ ಅರಿತಿರುವುದಾಗಿ ಹೇಳಿದ್ದಾರೆ.

'ನನ್ನ ಮೊದಲ ಸಿನಿಮಾ ಬಿಡುಗಡೆ ಆದಾಗ ನನಗೆ 20 ವರ್ಷ. ನನ್ನ ದಾರಿಯೇನೂ ಆರಾಮದ್ದಾಗಿರಲಿಲ್ಲ. ಆದರೆ ಮೆಚ್ಚುಗೆಗೆ ಅರ್ಹವಾಗಿದೆ. ಹೊಸಬಳಾಗಿ ನನಗೆ ಪಾತ್ರಗಳ ಆಯ್ಕೆ ಇರುವುದಿಲ್ಲ. ಆದರೆ ನನ್ನ ಗಮನ ಗಟ್ಟಿತನವಿರುವ ಪಾತ್ರಗಳತ್ತ. ಹೀಗಿದ್ದಾಗ ಮಾತ್ರ ಪಾತ್ರದ ಮೂಲಕ ಪ್ರಭಾವ ಬೀರಲು ಸಾಧ್ಯ' ಎಂದಿದ್ದಾರೆ. ■

